ಹಿಂದಿನ ಕಾಲದ ಸಾಹಿತ್ಯವನ್ನು ಓದುವುದೆಂದರೆ ಹಿಂದಕ್ಕೆ ಹೋಗುವುದೇನೂ ಆಗಿರುವುದಿಲ್ಲ. ಅಲ್ಲಿ ಮುಂದೆ ಸಾಗುವುದಕ್ಕೆ ಬೇಕಾದ ದಾರಿ, ಬೆಳಕು ಗೋಚರಿಸುತ್ತದೆ. ಅವುಗಳನ್ನು ನಾವು ಸ್ವೀಕರಿಸುತ್ತ ಹೋದಂತೆ ಅವು ಹೊಸದಾಗುತ್ತ ಹೋಗುತ್ತವೆ. ನಾವೇ ಹೊಸದನ್ನು ಸೃಷ್ಟಿ ಮಾಡದೇ ಇದ್ದರೂ ಪರಂಪರೆಯೇ ನಮಗೆ ಅನೇಕ ವಿಚಾರಗಳನ್ನು ಕಲಿಸುತ್ತಾ ಹೋಗುತ್ತದೆ. ಈ ಸೌಕರ್ಯ ಬೇರೆ ದೇಶಗಳ ಕಲಾಪ್ರಕಾರಗಳಲ್ಲಿ ಇಲ್ಲ ಎಂದು ನನಗೆ ಅನೇಕ ಬಾರಿ ಅನಿಸಿದೆ.

**◆ ಓದುವಿಕೆಯಲ್ಲಿ ನಿಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳುವುದು ಸಾಧ್ಯವಾಯಿತೇ?**

ಕ್ರಿ.ಶ.2ನೇ ಶತಮಾನದ 'ಶಿಲಪ್ಪದಿಕಾರಂ' ಕಾವ್ಯವನ್ನು ಓದಿದರೆ ಅಲ್ಲಿ ಕಲಾಪ್ರಕಾರಗಳಿಗೆ ಸಂಬಂಧಿಸಿದ ಎಷ್ಟೊಂದು ಆಸಕ್ತಿದಾಯಕ ಮಾಹಿತಿಗಳಿವೆ. ಒಂದು ವೇದಿಕೆಯು ಹೇಗಿರಬೇಕು, ಅಲ್ಲಿ ಸಭಿಕರಿಗೆ ಏನು ಸ್ಥಾನಮಾನಗಳು ಸಲ್ಲಬೇಕು, ಅಲ್ಲಿ ಬಳಸುವ ಪರದೆಗಳು ಹೇಗಿರಬೇಕು, ಒಂದು ನೃತ್ಯ ಪ್ರಸ್ತುತಿಗೆ ಮುನ್ನ ಎಷ್ಟು ಅವಧಿಯ ಅಭ್ಯಾಸ ಬೇಕಾಗುತ್ತದೆ, ಪರಿಪೂರ್ಣ ನರ್ತಕಿಯಾಗಿ ಹೊರಹೊಮ್ಮುವುದಕ್ಕೆ ಬೇಕಾಗುವ ತಾಲೀಮುಗಳು ಹೇಗಿರಬೇಕು ಮತ್ತು ಎಷ್ಟು ದೀರ್ಘ ಅವಧಿಯದ್ದಾಗಿರಬೇಕು ಎಂಬುದನ್ನೆಲ್ಲ ಅಲ್ಲಿ ಉಲ್ಲೇಖಿಸಲಾಗಿದೆ. ನೃತ್ಯಪಟುವಾಗಿ ಸಾಹಿತ್ಯದ ಕೃತಿಗಳನ್ನು ಕುತೂಹಲದ ಕಣ್ಣುಗಳಿಂದ ತೆರೆದು ನೋಡುವಾಗ ಸಿಗುವ ಇಂತಹ ಮಾಹಿತಿಗಳು ನನಗೆ ಬಹಳ ಹಿಡಿಸಿದವು. ಅಲ್ಲಿ ಮಾಧವಿ ಎಂಬ ನಾಯಕಿಯೊಬ್ಬಳು 11 ರೀತಿಯ ನೃತ್ಯವನ್ನು ಪ್ರಸ್ತುತಪಡಿಸುತ್ತಾಳೆ. ಅದರಲ್ಲಿ ಬರುವ 9ನೇ ನೃತ್ಯ 'ಪೇಡಿಯಾಡಲ್' ಎಂಬುದು ಟ್ರಾನ್ಸ್‌ಜೆಂಡರ್ಸ್ ಪಾತ್ರದ ನೃತ್ಯ. ಇದನ್ನೆಲ್ಲ ಓದಿದ್ದೇ ನನಗೆ ಬಹಳ ಖುಷಿಯಾಯಿತು. ನಮ್ಮಂತಹವರು ಅಂದಿನ ಕಾಲದಲ್ಲಿಯೂ ಇದ್ದರಲ್ಲ. ಅವರೂ ಏನೆಲ್ಲ ಕಷ್ಟಗಳನ್ನು ಎದುರಿಸಿ ಈ ಜಗತ್ತಿನಲ್ಲಿ ಬದುಕು ಸಾಗಿಸಿದ್ದರಲ್ಲ ಎಂದು ತುಸು ಸಮಾಧಾನವೂ ಆಯಿತು. 'ಶಿಲಪ್ಪದಿಕಾರಂ'ನಲ್ಲಿ ನನ್ನ ಪಾತ್ರವಿದೆಯಲ್ಲ ಎಂಬ ಭಾವವೇ ಮೈ ಝುಮ್ಮೆನ್ನುವಂತೆ ಮಾಡಿತು. ತಮಿಳು ಸಾಹಿತ್ಯ



ಕ್ಷೇತ್ರದಲ್ಲಿ 'ಶಿಲಪ್ಪದಿಕಾರಂ' ಓದಿದರೆ ಅವರನ್ನು ಬಹಳ ಗೌರವದಿಂದ ಕಾಣಲಾಗುತ್ತದೆ.

ಸಂಗಂ ಸಾಹಿತ್ಯವು ದೇವರ ಆರಾಧನೆಗೆ ಅಥವಾ ಮಹಿಮೆಯನ್ನು ಕೊಂಡಾಡುವುದಕ್ಕೆ ಸಂಬಂಧಿಸಿದ್ದಲ್ಲ. ಅದು ಮಾನವೀಯ ಸಂಬಂಧಗಳನ್ನು ವಿವರಿಸುವಂತಹುದು. ಪ್ರಣಯ ಕಾವ್ಯವೂ ಅಲ್ಲಿದೆ. ಸಂಗಂ ಸಾಹಿತ್ಯ ಅವಧಿಯನ್ನು ಆದಿ, ಮಧ್ಯಮ ಮತ್ತು ನವೀನ ಎಂದು ಮೂರು ಹಂತಗಳಲ್ಲಿ